# ಆಹಾ ಸುದ್ದಿ!

★ ಸಸಿತೋಟ



ಇದು ಬ್ರಿಟನ್ನಿನ ಆಭರಣ ವಿನ್ಯಾಸಗಾರ ವಿನ್ಯಾಸ ಮಾಡಿದ 'ಫ್ಯಾಂಟಸಿ' ಕಂಚುಕ. ವಜ್ರ, ಮಾಣಿಕ್ಯ ಮೊದಲಾದ ಬೆಲೆಬಾಳುವ ಹರಳುಗಳು ಕಂಚುಕದಲ್ಲಿ ಕೂತು ನೋಡುಗರಲ್ಲಿ ಹೊಟ್ಟೆಕಿಚ್ಚು ಹುಟ್ಟಿಸುವಂತಿವೆ. ಬೆಲೆ ಕೇಳಿದರೆ ಬೆರಳು ಕಚ್ಚುವಿರಿ. ಬರೋಬ್ಬರಿ 25 ಲಕ್ಷ ಡಾಲರ್. (ಸುಮಾರು 13.2 ಕೋಟಿ ರೂಪಾಯಿ). ಧರಿಸುವಾಕೆ ಧನ್ಯಳೋ, ಖರೀದಿಸಿ ಮನದನ್ನೆಯ ಮೋಹಕತೆ ನೋಡುವಾತ ಧನ್ಯನೋ!

ಬ್ರಿಟನ್ನಿನಲ್ಲಿ ಕಳವಾದ ಮೊಬೈಲ್ ಫೋನ್ ವಿಮಾ ಹಣಕ್ಕೆ ಕೋರಿಕೆ ಸಲ್ಲಿಸುವಾಗ ಎಂತೆಂತಹ ಕಾರಣಗಳನ್ನು ನೀಡುತ್ತಾರೆ ನೋಡಿ. ರೈತನೊಬ್ಬ ಆಕಳಿನ ಅಂಡಿಗೆ ಮೊಬೈಲ್ ಸಿಕ್ಕಿಸಿ, ಅದರ ಟಾರ್ಚ್ ಬೆಳಕಲ್ಲಿ ಹಾಲು ಕರೆಯುತ್ತಿದ್ದಾಗ ಟಾರ್ಚ್ ಸೀದಾ ಆಕಳಿನ ದೇಹದೊಳಗೇ ಹೋಗಿಬಿಟ್ಟಿತಂತೆ. ಇನ್ನೊಂದು ಫೋನ್‌ನಿಂದ ಅದಕ್ಕೆ ಕರೆ ಮಾಡಿ ನೋಡು ಎಂದು ವಿಮಾ ಕಂಪೆನಿ ಕೇಳಿಲ್ಲ. ಯುವತಿಯೊಬ್ಬಳ ಕೈಯಲ್ಲಿದ್ದ ಮೊಬೈಲ್ ಅನ್ನು ಪಕ್ಷಿಯೊಂದು ಕಚ್ಚಿಕೊಂಡು ಹಾರಿಹೋಯಿತಂತೆ. ಆ ಪಕ್ಷಿ ತನ್ನ ಪ್ರೇಮಿಗೆ ಫೋನ್ ಮಾಡಲು ಒಯ್ದಿರಬಹುದು! ಪಾಪ.. ವಿಮಾ ಕಂಪೆನಿಯವರ ತಲೆ ಕೆಟ್ಟು ಹೋಗುವುದೊಂದು ಬಾಕಿ.



ಆಕಾಶದಲ್ಲಿ, ಪಾತಾಳದಲ್ಲಿ, ತ್ರಿಶಂಕುವಿನಲ್ಲಿ.. ಹೀಗೆ ಕಂಡ ಕಂಡ ಕಡೆ ಮದುವೆ ಮಾಡಿಸಿಕೊಂಡು ಖುಷಿಪಟ್ಟ ಜೋಡಿಗಳೆಷ್ಟೋ! ಸ್ವೀಡನ್ನಿನ ಈ ಜೋಡಿ ರಕ್ಕಸ ಶಾಸ್ತ್ರದಂತೆ ಮದುವೆಯಾಗಿ ಬಯಕೆ ತೀರಿಸಿಕೊಂಡಿತು. ಇದು ಬ್ರಿಟನ್ನಿನ ಟೀವಿ ಚಾನೆಲ್ ಒಂದರಲ್ಲಿ ಪ್ರಸಾರವಾಗುವ 'ಸ್ಟಾರ್ ಟ್ರೆಕ್: ಡೀಪ್ ಸ್ಪೇಸ್ ನೈನ್' ಧಾರಾವಾಹಿಯಲ್ಲಿ ಜರುಗಿದ 'ಕ್ಲಿಂಗನ್' ಪದ್ಧತಿಯ ವಿವಾಹ ಸಂಪ್ರದಾಯವಂತೆ. ಈ ಸ್ವೀಡನ್ ಜೋಡಿಗೂ ಗುಟುರು ಹಾಕಿದಂತೆ ಕೇಳುವ ಭಾಷೆಯಲ್ಲೇ ಆಶೀರ್ವಾದವನ್ನೂ ಮಾಡಲಾಯಿತಂತೆ. ಮಧುಚಂದ್ರವೂ ಇದೇ ಪದ್ಧತಿಯಲ್ಲಿ ನಡೆಯುವುದಂತೆ. ಇದು ಕಾಲ್ಪನಿಕ ಕಥೆಯ ಧಾರಾವಾಹಿ. ಮದುವೆ, ಮಧುಚಂದ್ರ ಎಲ್ಲವೂ ಕಾಲ್ಪನಿಕ ಎಂದು ವಧು/ ವರ ಮದುವೆಗೆ ಸೋಡಾಚೀಟಿ ಕೇಳುವ ಸಂದರ್ಭದಲ್ಲಿ ಹೇಳಬಹುದು.

ಡೆನ್ಮಾರ್ಕ್‌ನ ನೋಮಾ ಉಪಾಹಾರಗೃಹದಲ್ಲಿ ನೀವು ಬಯಸಿದ್ದೆಲ್ಲಾ ಲಭ್ಯ. ಬ್ಲೂಬೆರಿ ಮತ್ತು ಮೊಸರನ್ನು ಕದಡಿ, ಅದಕ್ಕೆ ಇರುವೆಯ ಪೇಸ್ಟ್ ಸೇರಿಸಿ ಮಾಡಿದ ಖಾದ್ಯಕ್ಕೆ ಜನ ಇರುವೆಗಳಂತೆ ಮುಗಿ ಬೀಳುತ್ತಾರಂತೆ. ಜಗತ್ತಿನ ಉತ್ತಮ ಉಪಾಹಾರಗೃಹ ಪ್ರಶಸ್ತಿಯನ್ನು ಇದು 3 ಬಾರಿ ಪಡೆದಿದೆ ಎಂದರೆ ಕೇಳಬೇಕೆ! ಮುಂದಿನ ಹೊಸ ರುಚಿ ಬ್ಯಾಕ್ಟೀರಿಯ ಮತ್ತು ಯೀಸ್ಟ್ ಮಿಶ್ರಣವಂತೆ. ಬ್ಯಾಕ್ಟೀರಿಯ ಎಂದರೆ ಬೆಚ್ಚಿಬೀಳುವುದು ಬೇಡ. ಒಳ್ಳೆಯ ಬ್ಯಾಕ್ಟೀರಿಯವೂ ಇರುವುದಿಲ್ಲವೆ? ಆದರೆ ಬ್ಯಾಕ್ಟೀರಿಯ ಕೊಳ್ಳುವ ಮುನ್ನ ಚೆನ್ನಾಗಿದೆಯೇ ಎಂದು ತರಕಾರಿ ತರಹ ಚಿವುಟಿ ನೋಡುವ ಹಾಗೂ ಇಲ್ಲ.



ತೆಳ್ಳಗೆ ಬಳುಕುವವರಿಗಾಗಿ ಮಾತ್ರವೇ ಸೌಂದರ್ಯ ಸ್ಪರ್ಧೆಗಳಿರುವುದು? ಡುಮ್ಮಿಯರಿಗೆ ಯಾಕಿಲ್ಲ ಈ ಕ್ಷೇತ್ರ? ಕ್ವಾಲಾಲಂಪುರದಲ್ಲಿ ದಢೂತಿ ಮಹಿಳೆಯರಿಗೆಂದೇ 'ಜಂಬೋ ಕ್ವೀನ್' ಸ್ಪರ್ಧೆ ನಡೆಯಿತು. ಇಲ್ಲಿಯೂ ಕಂಡಕಂಡವರೆಲ್ಲ ಸ್ಪರ್ಧಿಸುವ ಹಾಗಿಲ್ಲ. ಕನಿಷ್ಠ ತೂಕವೇ 80 ಕೆಜಿ ಇರಬೇಕು. ಸ್ಪರ್ಧೆಯಲ್ಲಿ 'ಕ್ಯಾಟ್‌ವಾಕ್' ವಿಭಾಗಕ್ಕೆ ಏನೆಂದು ಕರೆದರೋ!



ಈ ಸೈಕಲ್ ಅನ್ನು ರೀಸೈಕಲ್ (ಮರುಬಳಕೆ) ಮಾಡಬಹುದು. ಓಡಿಸಿ ಬೇಸರ ಬಂದರೆ, ಉರುವಲವಾಗಿಯೂ ಬಳಸಬಹುದು ಎನ್ನುತ್ತಾರೆ ಕಾರ್ಡ್‌ಬೋರ್ಡ್‌ನಿಂದ ಸೈಕಲ್ ತಯಾರಿಸಿರುವ ಇಸ್ರೇಲಿನ ಗಫಿನಿ. ಮಾರ್ಗ ಮಧ್ಯದಲ್ಲಿ ಕೆಟ್ಟು ಹೋದರೆ ಮೆಕ್ಯಾನಿಕ್ ಕರೆಯುವ ಅಗತ್ಯವೂ ಇಲ್ಲ. ಆರಾಮವಾಗಿ ಹೆಗಲ ಮೇಲೆಯೇ ಹೊತ್ತೊಯ್ಯಬಹುದು.